ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಶಿರಸಿ ವಿಭಾಗ, ಶಿರಸಿ –581 401
OFFICE OF THE DEPUTY CONSERVATOR OF FORESTS, Sirsi DIVISION, Sirsi -581 401
ದೂರವಾಣಿ: 08384 226445 Mail : dcfsirsi@gmail.com

ಕ್ರ.ಸಂ:ಎ2/ಕಟ್ಟಡ/ವಿವ–27/2019–20 ದಿನಾಂಕ:11–07–2019.

**2019–20 ನೇ ಸಾಲಿಗೆ ಇಲಾಖಾ ವಸತಿಗೃಹ ಕಟ್ಟಡ ನಿರ್ಮಾಣ ಕಾಮಗಾರಿಗಳಿಗಾಗಿ ಮರು ಟೆಂಡರ ಪ್ರಕಟಣೆ:**
**(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಮಾತ್ರ)**
**(ದ್ವಿ ಲಕೋಟೆ ಸಿಸ್ಟಂ)**

**********

ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವದೇನೆಂದರೆ, ಶಿರಸಿ ಅರಣ್ಯ ವಿಭಾಗದಲ್ಲಿ 2019–20 ನೇ ಸಾಲಿನಲ್ಲಿ ಜಾನ್ಮನೆ ವಲಯದ ಉಪ ವಲಯ ಅರಣ್ಯಾಧಿಕಾರಿಯವರ ವಸತಿ ಗೃಹ ಮತ್ತು ಸಿದ್ದಾಪುರ ವಲಯದ ಮನ್ಮನೆ ಅರಣ್ಯ ರಕ್ಷಕರ ವಸತಿ ಗೃಹ ಕಟ್ಟಡ ನಿರ್ಮಾಣದ ಕಾಮಗಾರಿಗಳಿಗೆ ಪಾರದರ್ಶಕ ನಿಯಮಗಳನುಸಾರ ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿರಸಿ ವಿಭಾಗ, ಶಿರಸಿ ಇವರ ಕಛೇರಿಯಲ್ಲಿ ಲಭ್ಯವಿರುವ ಅಂದಾಜು ಪತ್ರಿಕೆ/ಸ್ಕೆಚ್/ಡಿಸೈನ್ ಹೊಂದಿರುವ ಕಟ್ಟಡ ನಿರ್ಮಿಸುವ ಕಾಮಗಾರಿಗೆ 2019–20 ನೇ ಸಾಲಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಮರು ಟೆಂಡರ ಆಹ್ವಾನಿಸಲಾಗಿದೆ. ಇ–ಟೆಂಡರ್ ವಿವರಗಳು & ಷರತ್ತುಗಳು ಈ ಕೆಳಗಿನಂತಿರುತ್ತವೆ.

| | | |
|---|---|---|
| 1 | **ಟೆಂಡರ ನಡೆಯುವ ಸ್ಥಳ** | ಇ–ಟೆಂಡರ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿರಸಿ ವಿಭಾಗ, ಶಿರಸಿ–581401, ಉತ್ತರ ಕನ್ನಡ ಜಿಲ್ಲೆ. |
| 2 | **ಟೆಂಡರ ಹಾಕಲು ಅಂತಿಮ ದಿನಾಂಕ & ವೇಳೆ** | ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:01–08–2019 ರಂದು ಅಪರಾಹ್ನ 3.00 ಘಂಟೆ.<br>ಅ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 03–08–2019 ಅಪರಾಹ್ನ 4.00 ಘಂಟೆ ತಾಂತ್ರಿಕ ಬಿಡ್‌ನ ಷರತ್ತುಗಳಲ್ಲಿ ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವದು. ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವದು.<br>ಆ) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 04–08–2019 ಅಪರಾಹ್ನ 4.00 ಘಂಟೆ. |
| 3 | **ಟೆಂಡರ ಸ್ವೀಕರಿಸುವ ಅಧಿಕಾರಿಗಳು** | (ಇ–ಟೆಂಡರ್), ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿರಸಿ ವಿಭಾಗ, ಶಿರಸಿ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿ. |
| 4 | **ಕಾಮಗಾರಿ ವಿವರ ಮತ್ತು ನಿಗಧಿಪಡಿಸಿದ ಮೊತ್ತ** | ಅನುಭಂದ–1 ರಲ್ಲಿ ಯುನಿಟ್‌ಗಳ ಮುಂದೆ ಇದ್ದಂತೆ, |
| 5 | **ಇ.ಎಂ.ಡಿ ಮೊತ್ತ (2.50%)** | ಅನುಭಂದ–1, ರಲ್ಲಿ ಆಯಾ ಯುನಿಟ್‌ಗಳ ಮುಂದೆ ಇದ್ದಂತೆ, |

**ಷರತ್ತುಗಳು:**

1) ಜಂಟಿ ಟೆಂಡರ್ ಹಾಕಲು ಅವಕಾಶವಿರುವುದಿಲ್ಲ.

2) ಈ ಕಾಮಗಾರಿಗಳನ್ನು ಕೈಗೊಳ್ಳಲು ಇಚ್ಛಿಸುವ ಸಾರ್ವಜನಿಕರು ಈ ಕಚೇರಿಯಲ್ಲಿ 2019–20 ನೇ ಸಾಲಿನಲ್ಲಿ ದಿನಾಂಕ:01–08–2019 ರ ಪೂರ್ವದಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಿ ಕೊಂಡಿರುವವರು ಮಾತ್ರ ಟೆಂಡರ ಹಾಕಲು ಅರ್ಹರಿರುತ್ತಾರೆ.

3) ದಿನಾಂಕ: 01–08–2019 ರಂದು ನಡೆಯುವ ಟೆಂಡರ ಪ್ರಕ್ರಿಯೆಯಲ್ಲಿ ಯಾರೂ ಭಾಗವಹಿಸದೇ ಇದ್ದ ಪಕ್ಷದಲ್ಲಿ ಒಂದೇ ಟೆಂಡರ್ ಸ್ವೀಕೃತಿಯಾದ್ದಲ್ಲಿ ಅಥವಾ ಭಾಗಶ: ಯುನಿಟ್‌ಗಳಿಗೆ ಟೆಂಡರ್ ಬಂದಲ್ಲಿ, ಬಾಕಿ ಉಳಿದ ಯುನಿಟ್‌ಗಳಿಗೆ ಮರು ಟೆಂಡರ ನಡೆಸಲಾಗುವುದು.

4) **ಟೆಂಡರ ಪ್ರಕ್ರಿಯೆಯಲ್ಲಿ ಈ ಕೆಳಕಾಣಿಸಿದ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಸದರಿ ದಾಖಲೆಗಳ ಮೂಲ ಪ್ರತಿಗಳನ್ನು ಟೆಂಡರ್ ತೆರೆದ ನಂತರ ಈ ಕೆಳ ಸಹಿದಾರರ ಪರಿಶೀಲನೆಗೆ ಹಾಜರುಪಡಿಸುವುದು.**

ಂ. 2019–20 ನೇ ಸಾಲಿನಲ್ಲಿ ಅರಣ್ಯ ಇಲಾಖೆಯ ಶಿರಸಿ ವಿಭಾಗದಲ್ಲಿ ಅರಣ್ಯಾ ಗುತ್ತಿಗೆದಾರರೆಂದು ನೊಂದಾಯಿಸಿಕೊಂಡ ಅಥವಾ ನವೀಕರಿಸಿಕೊಂಡ ಪ್ರಮಾಣ ಪತ್ರದ ನಕಲು.

ಃ. 2016–17, 2017–18 ಮತ್ತು 2018–19 ನೇ ಸಾಲಿನ ಆದಾಯ ತೆರಿಗೆ ರಿಟರ್ನ್ಸ್

ಅ. 2016–17, 2017–18 ಮತ್ತು 2018–19 ನೇ ಸಾಲಿನ ಬ್ಯಾಲನ್ಸ್ ಶೀಟ್

ಆ. 2016–17ನೇ ಸಾಲಿನ ವ್ಯಾಟ್ ಕ್ಲಿಯರನ್ಸ್ ಮತ್ತು 2017–18 ಮತ್ತು 2018–19 ನೇ ಸಾಲಿನ ಜಿಎಸ್‌ಟಿ ಕ್ಲಿಯರನ್ಸ್

ಇ. ಸರ್ಕಾರಿ ಇಲಾಖೆಯಲ್ಲಿ ಕಾಮಗಾರಿ ಕೈಗೊಂಡ ಕುರಿತು ಕಾಮಗಾರಿ (work done) ಪ್ರಮಾಣಪತ್ರ

ಈ. ಲೋಕೋಪಯೋಗಿ ಇಲಾಖೆಯಲ್ಲಿ ಕ್ಲಾಸ್–2 ಮತ್ತು ಅದಕ್ಕೂ ಮೇಲ್ದರ್ಜೆಯ ಗುತ್ತಿಗೆದಾರರೆಂದು ನೊಂದಾಯಿಸಿಕೊಂಡಿರುವ ದಾಖಲೆ.

ಉ. ಜಿ.ಎಸ್.ಟಿ. ನೋಂದಣಿ ಪ್ರಮಾಣ ಪತ್ರದ ನಕಲು.

ಊ. ಪಾನ್ ಕಾರ್ಡ್ ನಕಲು.

ಋ. ಆಧಾರ್ ಕಾರ್ಡ್ ನಕಲು.

5) ಒಂದು ವೇಳೆ ಮೇಲೆ ತಿಳಿಸಿದ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳೆಂದು ಘೋಷಿಸಿದಲ್ಲಿ ಮರು ಕೆಲಸದ ದಿನ ಮತ್ತು ಅದೇ ವೇಳೆಗೆ ಟೆಂಡರ ಪ್ರಕ್ರಿಯೆ ತೆರೆಯಲಾಗುವುದು.

6) ಕಡಿಮೆ ಹಾಗೂ ಮುಂದಿನ ಅತೀ ಕಡಿಮೆ ಬಿಡ್ ಮಾಡಿದ ಟೆಂಡರದಾರರ ಇ.ಎಂ.ಡಿ. ಮೊತ್ತವನ್ನು ಹೊರತುಪಡಿಸಿ ಉಳಿದೆಲ್ಲ ಟೆಂಡರದಾರರ ಇ.ಎಂ.ಡಿ. ಹಣವನ್ನು ಇ–ಪೇಮೆಂಟ್ ಮುಖಾಂತರ ಹಿಂತಿರುಗಿಸಲಾಗುವುದು ಹಾಗೂ ಮುಂದಿನ ಅತೀ ಕಡಿಮೆ ಬಿಡ್‌ದಾರರ ಇ.ಎಂ.ಡಿ. ಹಣವನ್ನು ಟೆಂಡರ್ ಕಾರ್ಯ ಮುಗಿದ ನಂತರ ಹಿಂದಿರುಗಿಸಲಾಗುವುದು. ಇ.ಎಂ.ಡಿ. ಇಟ್ಟಿರುವ ಹಣಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

7) ಯಶಸ್ವಿ ಬಿಡ್ಡದಾರರು ಮಾಹಿತಿ ಮುಟ್ಟಿದ 48 ಗಂಟೆ / 2 ದಿವಸಗಳೊಳಗಾಗಿ ಕರಾರುನಾಮೆ ಮಾಡಿಕೊಳ್ಳಲು ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ರೂ.200/– ಮೌಲ್ಯದ ಛಾಪಾ ಕಾಗದದೊಂದಿಗೆ ಉಪ ಅರಣ್ಯಾ ಸಂರಕ್ಷಣಾಧಿಕಾರಿಗಳು, ಶಿರಸಿ ವಿಭಾಗ, ಶಿರಸಿ ಇವರ ಮುಂದೆ ಕರಾರುನಾಮೆ ಮಾಡಿಕೊಳ್ಳುವುದು.

8) ಯಶಸ್ವಿ ಬಿಡ್‌ದಾರರು ಗುತ್ತಿಗೆ ಮೌಲ್ಯದ ಶೇಕಡಾ 5% ರಂತೆ ಭದ್ರತಾ ಠೇವಣಿಯನ್ನು ಕಾಮಗಾರಿ ಕೈಗೊಳ್ಳುವ ಪೂರ್ವದಲ್ಲಿ ಈ ಕೆಳ ಸಹಿದಾರರ ಪದನಾಮದಲ್ಲಿ ಇಡುವುದು. ಒಂದು ವೇಳೆ ಗುತ್ತಿಗೆದಾರನು ಟೆಂಡರ ದರಕ್ಕಿಂತ ಶೇಕಡಾ 15 ಕ್ಕಿಂತ ಕಡಿಮೆ ಬಿಡ್ ಮಾಡಿದಲ್ಲಿ ಟೆಂಡರ ಮೊತ್ತಕ್ಕೆ ಬಾಕಿ ಉಳಿಯುವ ವ್ಯತ್ಯಾಸದ ಮೊತ್ತವನ್ನು ಹೆಚ್ಚುವರಿಯಾಗಿ ಠೇವಣಿಯನ್ನು ಇರಿಸುವುದು.

9) ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ಯಾವುದೇ ಕಾರಣ ಕೊಡದೇ ಮಂಜೂರು ಮಾಡುವ ಅಥವಾ ನಿರಾಕರಿಸುವ ಅಥವಾ ಮರು ಟೆಂಡರ ಕೈಕೊಳ್ಳುವ ಪೂರ್ತಿ ಅಧಿಕಾರವನ್ನು ಉಪ ಅರಣ್ಯಾ ಸಂರಕ್ಷಣಾಧಿಕಾರಿಗಳು, ಶಿರಸಿ ವಿಭಾಗ, ಶಿರಸಿ ಇವರು ಹೊಂದಿರುವರು.

10) ಈ ಮೇಲಿನ ನಿಬಂಧನೆಗಳೊಂದಿಗೆ ಕಾಲಕಾಲಕ್ಕೆ ಅವಶ್ಯವೆನಿಸಿದಲ್ಲಿ ಇನ್ನೂ ಹೆಚ್ಚಿನ ನಿಬಂಧನೆಗಳನ್ನು ಸೇರಿಸುವ ಅಥವಾ ತೆಗೆದು ಹಾಕುವ ಅಥವಾ ಇವುಗಳನ್ನು ಮಾರ್ಪಾಡು ಮಾಡುವ ಪೂರ್ಣ ಅಧಿಕಾರವನ್ನು ಉಪ ಅರಣ್ಯಾ ಸಂರಕ್ಷಣಾಧಿಕಾರಿಗಳು, ಶಿರಸಿ ವಿಭಾಗ, ಶಿರಸಿ ಇವರು ಹೊಂದಿರುವರು.

11) ಯಶಸ್ವಿ ಟೆಂಡರ್‌ದಾರರು ನಿಗದಿತ ಅವಧಿಯೊಳಗೆ ಕೆಲಸಗಳನ್ನು ಪೂರ್ತಿಗೊಳಿಸಿ, ನಿಯಮಾನುಸಾರ ಬಿಲ್ಲುಗಳನ್ನು ತಯಾರಿಸಿ ಸಂಬಂಧಿಸಿದ ವಲಯ ಅರಣ್ಯಾ ಅಧಿಕಾರಿಗಳಿಗೆ ಸಲ್ಲಿಸುವದರೊಂದಿಗೆ, ಎಂ.ಬಿ.ಯಲ್ಲಿ ಸಂಬಂಧಿಸಿದ ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯಾ ಸಂರಕ್ಷಣಾಧಿಕಾರಿಗಳಿಂದ ಅಳತೆ ಮಾಪನ ಮಾಡಿಸಿ ಈ ಕಛೇರಿಗೆ ಸಲ್ಲಿಸಿದ ನಂತರ ಅನುದಾನ ಲಭ್ಯತೆಯ ಆಧಾರದ ಮೇಲೆ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು. ಹಾಗೂ ಒಂದೊಮ್ಮೆ 2019–20ನೇ ಸಾಲಿನಲ್ಲಿ ಹಣ ಬಿಡುಗಡೆಯಾಗದ ಪಕ್ಷದಲ್ಲಿ ಕಾಮಗಾರಿಗಳಿಗೆ ಮೊತ್ತವನ್ನು ಪಾವತಿಸಲು ಮುಂದುವರೆದ ಕಾಮಗಾರಿಗಳೆಂದು ಪರಿಗಣಿಸಿ ಪಾವತಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

12) ಯಶಸ್ವಿ ಟೆಂಡರ್‌ದಾರರು ಕೆಲಸ ಪ್ರಾರಂಭಿಸಿದ ನಂತರ ನಿಗಧಿತ ಅವಧಿಯೊಳಗೆ ಕೆಲಸ ಪೂರ್ಣಗೊಳಿಸದೇ ಇದ್ದಲ್ಲಿ, ಅಥವಾ ಕಳಪೆ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಅಂತಹ ಟೆಂಡರುದಾರರಿಗೆ ನೀಡಿರುವ ಕಾರ್ಯಾದೇಶ ಹಿಂದಕ್ಕೆ ಪಡೆಯಲಾಗುವುದು. ಮತ್ತು ಅಂತಹ ಕೆಲಸಗಳಿಗೆ ಯಾವುದೇ ಹಣ ಪಾವತಿಸಲಾಗುವುದಿಲ್ಲ ಮತ್ತು ಅವರು ಇಟ್ಟಂತಹ ಇಎಂಡಿ ಹಾಗೂ ಭದ್ರತಾ ಠೇವಣಿಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

13) ಪ್ರತಿಯೊಂದು ಯುನಿಟ್‌ಗೆ ಪ್ರತ್ಯೇಕವಾಗಿ ದರ ನಮೂದಿಸುವುದು.

14) ಬಿಡ್‌ದಾರರು ಸಂಬಂಧಿಸಿದ ಬ್ಯಾಂಕಿನಿಂದ ಇ-ಟೆಂಡರ್ ಪ್ರೊಸ್ಸೆಸಿಂಗ್ ಶುಲ್ಕ ಹಾಗೂ ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಒಂದೇ ಇಡಿಗಂಟಿನಲ್ಲಿ ಟೆಂಡರ್ ಹಾಕುವ ಕೊನೆಯ ದಿವಸದೊಳಗಾಗಿ ಸಲ್ಲಿಸುವುದು.

15) ಯುಕ್ತ ಪ್ರಾಧಿಕಾರಿ (Compentent Authority)/ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶಿರಸಿ ರವರು ಇ-ಪ್ರೊಕ್ಯೂರ್‌ಮೆಂಟ್‌ನ್ನು ಯಾವುದೇ ಮುನ್ಸೂಚನೆ, ಯಾವುದೇ ಕಾರಣವಿಲ್ಲದೇ ಹಿಂತೆಗೆದುಕೊಳ್ಳುವ ಹಾಗೂ ಯಾವುದೇ ಸಕಾರಣವಿಲ್ಲದೇ ಮುಂದೂಡುವ ಮತ್ತು ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ರೀತಿಯ ಬದಲಾವಣೆ / ತಿದ್ದುಪಡಿ ಮಾಡುವ ಪೂರ್ಣ ಅಧಿಕಾರಿ ಹೊಂದಿರುತ್ತಾರೆ. ಹಾಗೂ ಟೆಂಡರ್ ಹಿಂಪಡೆದ ನಂತರ ಟೆಂಡರ್ ಪ್ರೊಸ್ಸೆಸಿಂಗ್ ಫೀ ಶುಲ್ಕ ಹಾಗೂ ಇ.ಎಂ.ಡಿ ಮೊತ್ತಕ್ಕೆ ಈ ಕೆಳಸಹಿದಾರರು ಜವಾಬ್ದಾರರಾಗುವುದಿಲ್ಲ.

16) ಕಾಮಗಾರಿಯ ವೇಳೆ ಎಲ್ಲ ರೀತಿಯ ಸುರಕ್ಷತಾ ಸಾಧನಗಳನ್ನು ಇಟ್ಟುಕೊಳ್ಳುವುದು. ರಾತ್ರಿವೇಳೆ ಸಾಧನ ಸಾಮಗ್ರಿಗಳ ಪರಿಕರಗಳಿಗೆ ಕಾವಲು ಕಾಯುವ ಸಿಬ್ಬಂದಿಗಳನ್ನು ಟೆಂಡರ್‌ದಾರರೇ ನೇಮಕ ಮಾಡಿಕೊಳ್ಳುವುದು. ಈ ಬಗ್ಗೆ ಇಲಾಖೆಯು ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ.

17) ಕಾಮಗಾರಿಯ ವೇಳೆ ಟೆಂಡರ್‌ದಾರರು ನೇಮಿಸಿದ ಕಾರ್ಮಿಕರಿಗೆ ಯಾವುದೇ ರೀತಿ ಪ್ರಾಣಾಪಾಯ ಹಾನಿ ಉಂಟಾದಲ್ಲಿ ಅದಕ್ಕೆ ಟೆಂಡರ್‌ದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಇಲಾಖೆಯು ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ.

18) ಕಾರ್ಯಾದೇಶ ನೀಡಿದ ದಿನಾಂಕದಿಂದ 31-ಜನವರಿ-2020 ರೊಳಗಾಗಿ ಆಯಾ ಕಾಮಗಾರಿಗಳನ್ನು ತಪ್ಪದೇ ಪೂರ್ಣಗೊಳಿಸಬೇಕಾಗುವುದು.

19) ಈ ಕಾಮಗಾರಿಗಳಿಗೆ ಟೆಂಡರ ದರ / ಮೊತ್ತಕ್ಕಿಂತ ಹೆಚ್ಚಿನ ದರ /ಮೊತ್ತವನ್ನು ನೀಡಲಾಗುವುದಿಲ್ಲ. ಹೆಚ್ಚಿನ ಮೊತ್ತ ನಮೂದಿಸಿದಲ್ಲಿ ತಿರಸ್ಕರಿಸಲಾಗುವುದು.

20) ಮಂಜೂರಾದ ಅಂದಾಜು ಪತ್ರಿಕೆಗಳನುಸಾರ ಅಳತೆ ಮಾಪನ ಮಾಡಿದ ನಂತರ ಅನುದಾನ ಲಭ್ಯತೆಗೆ ಅನುಸಾರ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡಲಾಗುವುದು.

21) ತಾಂತ್ರಿಕ ಮತ್ತು ಕಲಾಕೃತಿಗಳ ಕಾಮಗಾರಿಗಳನ್ನು ಅರ್ಹ ವ್ಯಕ್ತಿಗಳಿಂದ ಮಾಡಿಸಿಕೊಳ್ಳುವುದು, ಒಂದು ವೇಳೆ ಸದರಿ ಕಾಮಗಾರಿಯ ಗುಣಮಟ್ಟ ಸರಿಯಾಗಿಲ್ಲದಿದ್ದಲ್ಲಿ ಹಣ ಪಾವತಿಸಲಾಗುವುದಿಲ್ಲ.

22) ಇ-ತಂತ್ರಾಂಶದಲ್ಲಿ ಭಾಗವಹಿಸುವ ಟೆಂಡರದಾರರು ಸದರ ಮಾಹಿತಿಯನ್ನು ತಾವು ಉಪಯೋಗಿಸುವ ಕಂಪ್ಯೂಟರನಲ್ಲಿ ಪೋರ್ಟಲ್ ಲಭ್ಯವಿದೆಯೇ ಇಲ್ಲವೋ ಅದನ್ನು ಮೊದಲೇ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಪೋರ್ಟಲ್ ಲಭ್ಯವಾಗದೇ ಇದ್ದಲ್ಲಿ ಇಲಾಖೆಯು ಇದಕ್ಕೆ ಹೊಣೆಗಾರರಾಗುವುದಿಲ್ಲ.

23) ಗುತ್ತಿಗೆದಾರರು ಕರಾರುನಾಮೆಗೆ ಸಹಿ ಹಾಕಿದ ನಂತರ ಮೃತಪಟ್ಟಲ್ಲಿ ಅವರ ವಾರಸುದಾರರು ನೊಂದಾಯಿತ ಗುತ್ತಿಗೆದಾರರಾಗಿದ್ದಲ್ಲಿ ಅವರು ಸದರಿ ಕೆಲಸವನ್ನು ಮುಂದುವರೆಸಿ ಕಾಮಗಾರಿಯನ್ನು ನಿಗದಿತ ದರದಲ್ಲಿ ಮುಕ್ತಾಯಗೊಳಿಸಬಹುದು.

24) ಕಾಮಗಾರಿ ಕೈಗೊಳ್ಳುವ ಸಮಯದಲ್ಲಿ ಯಾವುದೇ ಅಹಿತಕರ ಘಟನೆಗಳು ತಪ್ಪಿಸಲು ಎಲ್ಲಾ ಸುರಕ್ಷತಾ ಕ್ರಮಗಳು, ಮುನ್ನೆಚ್ಚರಿಕೆ ಫಲಕಗಳು, ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆದಾರರೆ ನೇಮಿಸಿಕೊಳ್ಳುವುದು. ಒಂದುವೇಳೆ ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಅದಕ್ಕೆ ಗುತ್ತಿಗೆದಾರರೇ ಹೊಣೆಗಾರರಾಗುತ್ತಾರೆ.

25) ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ರೊಸೆಸ್ಸಿಂಗ್ ಶುಲ್ಕ (ರೂ.500.00ನ್ನು ಮತ್ತು ಗರಿಷ್ಠ ರೂ.7500.00 ರವರೆಗೆ) ಪಾವತಿಸಲು ಬದ್ಧರಾಗಿರಬೇಕು.

26) ತಮ್ಮ ವ್ಯವಹಾರದಲ್ಲಿ ಅನಧಿಕೃತ ಅಥವಾ ಅನೈತಿಕ ವ್ಯವಹಾರ ಮಾಡಿದ್ದಕ್ಕಾಗಿ ಅಪರಾಧಿಯಾಗಿ ನ್ಯಾಯಾಲಯದಲ್ಲಿ ತಪ್ಪಿತಸ್ಥನೆಂದು ನಿರ್ಧರಿಸಲ್ಪಟ್ಟ ವ್ಯಕ್ತಿಗಳು ಅಥವಾ ಕಪ್ಪು ಪಟ್ಟಿಯಲ್ಲಿ ಸೇರಿಸಿದವರು ಅಥವಾ ದಿವಾಳಿಕೋರರು ಅಥವಾ ಸರ್ಕಾರಕ್ಕೆ ಕೊಡಬೇಕಾದ ಬಾಕಿಯನ್ನು ಕೊಡಲು ತಪ್ಪಿದವರು ಅಥವಾ ಅಪ್ರಾಪ್ತ ವಯಸ್ಸಿನವರು ಕೊಟ್ಟ ಟೆಂಡರುಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಇಂಥ ವ್ಯಕ್ತಿಗಳು ಟೆಂಡರು ಕೊಟ್ಟಲ್ಲಿ ಅಂಥ ಟೆಂಡರುಗಳ ಜೊತೆಯಲ್ಲಿ ಇಟ್ಟ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಲಾಗುವುದು.

27) ಗುತ್ತಿಗೆದಾರರು ಸಿಬ್ಬಂದಿ/ಕೂಲಿ ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಶಾಸನಗಳಿಗೆ ಬದ್ಧನಾಗಿದ್ದು, ಅವುಗಳಲ್ಲಿ ಸೂಚಿಸಲಾಗಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

i) Workman's Compensation Act 1923.

ii) Payment of wages Act 1935

iii) Minimum wage Act 1948

iv) Child labour Act 1938

v) Employer's liability Act 1938

vi) Other acts of Central & State that may applicable time to time.

28) ಹೆಚ್ಚಿನ ವಿವರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿರಸಿ ವಿಭಾಗ, ಶಿರಸಿ ಇವರ ಕಚೇರಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಶಿರಸಿ ವಿಭಾಗ, ಶಿರಸಿ-581 401
OFFICE OF THE DEPUTY CONSERVATOR OF FORESTS, Ssirsi DIVISION, Sirsi-581 401
ದೂರವಾಣಿ: 08384 226445 Mail : dcfsirsi@gmail.com

=======================================

***2019-20 ನೇ ಸಾಲಿಗೆ ಶಿರಸಿ ಅರಣ್ಯ ವಿಭಾಗದಲ್ಲಿ ಇಲಾಖಾ ವಸತಿ ಗೃಹ ಕಟ್ಟಡಗಳ ನಿರ್ಮಾಣದ ಇ-ಟೆಂಡರ್ ಕರೆಯಲಾದ ಕಟ್ಟಡಗಳ ವಿವರವು ಈ ಕೆಳಗಿನಂತೆ ಇರುತ್ತದೆ.***

***ಅನುಬಂಧ – 1***

| Unit No. | Range | Budget Head | Particulars of Works | Quantity | | Estimated Amount (Rs.) | E.M.D. (Rs.) | Completion of work contracts expire | Remarks |
|---|---|---|---|---|---|---|---|---|---|
| *1* | *2* | *3* | *4* | *5* | | *6* | *7* | *8* | *9* |
| 56. | Janmane | 2406-01-070-0-02-147-Land & Building | Construction of Dy,RFO Quarters at Ragihosalli. | 1 | No | 15,12,000 | 38,000 | 31-01-2020 | |
| 57. | Siddapur | 2406-01-070-0-02-147-Land & Building | Construction of Forest Guard Quarters at Manmane Govt.Timber Depot. | 1 | No | 12,70,000 | 31,800 | 31-01-2020 | |

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಶಿರಸಿ ವಿಭಾಗ, ಶಿರಸಿ.